ದಿನಾಂಕಃ 12.08.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 1 ರಿಂದ 4 ನೇ ಪ್ರತಿವಾದಿ ಪರ ಶ್ರೀ ಕೆ.ಎ.ಎಂ. ವಕೀಲರಿಂದ:**

ನಾನು ಬಿ.ಸಿ.ಎ. ಪಧವೀಧರ ಆದರೆ ನಾನು ಉದ್ಯೋಗವನ್ನು ಮಾಡುತ್ತಿರುವುದಿಲ್ಲ. ನಾನು ಈಗ ವೃತ್ತಿಯಲ್ಲಿ ಕೃಷಿಕ. ನಮ್ಮ ಕಾಫೀ ತೋಟ ಹಳೇಕೋಟೆ ಮತ್ತು ಕುಕ್ಕಳ್ಳಿಹರದಲ್ಲಿ ಇವೆ. ನಮ್ಮ ಹೆಸರಿನಲ್ಲಿರುವ ಜಮೀನಿನ ಸ.ನಂ.307 ಅದರ ವಿಸ್ತೀರ್ಣವು 2 ಎಕರೆ, ಸ.ನಂ.78/1 ಅದರ ವಿಸ್ತೀರ್ಣವು 1 ಎಕರೆ 20 ಗುಂಟೆ, ಸ.ನಂ.78/2 ಅದರ ವಿಸ್ತೀರ್ಣವು 1 ಎಕರೆ 20 ಗುಂಟೆ, ಸ.ನಂ.118/3 ಅದರ ವಿಸ್ತೀರ್ಣವು 1 ಎಕರೆ 20 ಗುಂಟೆ, ಸ.ನಂ.115 ಅದರ ವಿಸ್ತೀರ್ಣವು 5 ಎಕರೆ ಮತ್ತು ಇತರೆ ತರೀ ಜಮೀನುಗಳು ಇದ್ದು ಅವುಗಳ ಸ.ನಂ. ನೆನಪಾಗುತ್ತಿಲ್ಲ. ನಮ್ಮ ತಂದಗೆ ನಾನು ಒಬ್ಬನೇ ಮಗ. ಪ್ರಸ್ತುತ ಪ್ರಕರಣದ ಬಗ್ಗೆ ಮಾಹಿತಿಯನ್ನು ನನ್ನ ತಾಯಿಯಿಂದ ತಿಳಿದುಕೊಂಡಿರುತ್ತೇನೆ. ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. 1987 ರ ಸಮಯದಲ್ಲಿ ನನ್ನ ತಂದೆಯು ಪ್ರತಿವಾದಿಯವರ ತಂದೆಯ ಒಟ್ಟಿಗೆ ವ್ಯವಹರಿಸುವ ಸಮಯದಲ್ಲಿ ನಾನು ಜನಿಸಿರಲಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ 5 ಜನ ಪ್ರತಿವಾದಿಗಳು ಇರುತ್ತಾರೆ. ಈ ಪ್ರಕರಣವನ್ನು ಹೊರತುಪಡಿಸಿ ಪ್ರತಿವಾದಿಯವರು ಇನ್ನೊಂದು ದಾವೆಯನ್ನು ದಾಖಲಿಸಿರುವ ಬಗ್ಗೆ ನನಗೆ ಮಾಹಿತಿ ಇರುತ್ತದೆ ಮತ್ತು ಸದರಿ ಸಂಖ್ಯೆ ನನಗೆ ತಿಳಿದಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಪ್ರಕರಣವು ವಜಾಗೊಂಡಿರುತ್ತದೆ ಎಂಬುದರ ಮಾಹಿತಿ ನನಗಿರುತ್ತದೆ. ಸದರಿ ವಿಷಯದ ಕುರಿತು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

ಈ ಹಿಂದೆ ನನ್ನ ತಂದೆಯು ಪ್ರತಿವಾದಿಯವರ ತಂದೆಯ ಒಟ್ಟಿಗೆ ವ್ಯವಹಿಸುತ್ತಿದ್ದ ಬಾಬ್ತು 8 ರಿಂದ 10 ವರ್ಷಗಳ ಹಿಂದೆಯೇ ನನ್ನ ಗಮನಕ್ಕೆ ಬಂದಿರುತ್ತದೆ. ಪ್ರತಿವಾದಿಯವರ ಜಮೀನು ನಮ್ಮ ಜಮೀನಾದ ಸ.ನಂ.307 ರ ಪಕ್ಕದಲ್ಲಿ ಬರುತ್ತದೆ. ಪ್ರತಿವಾದಿಯವರ ಜಮೀನಿನ ಸ.ನಂ. ಪ್ರಸ್ತುತವಾಗಿ 365 ಈ ಹಿಂದೆ ಸ.ನಂ.122 ಆಗಿತ್ತು. ಪ್ರತಿವಾದಿಯವರ ಜಮೀನಿಗೆ ಲಗತ್ತಾಗಿರುವ ನಮ್ಮ ಜಮೀನಿನ 2 ಎಕರೆ ವಿಸ್ತೀರ್ಣದಲ್ಲಿ ಕಾಫೀ ಮತ್ತು ಅಡಿಕೆ ಮತ್ತು ಮೆಣಸಿನ ಬೆಳೆಯನ್ನು ಬೆಳೆಯುತ್ತೇವೆ. ನಮ್ಮ ಜಮೀನುಗಳಿಗೆ ಗಡಿ ಗುರುತನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಮ್ಮ ಜಮೀನುಗಳಿಗೆ ಗಡಿ ಗುರುತನ್ನು ಮಾಡುವ ಪೂರ್ವದಲ್ಲಿ ಪ್ರತಿವಾದಿಗಳಿಗಾಗಲೀ ಅಥವಾ ಅವರ ತಂದೆಯವರಿಗಾಗಲೀ ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ಆ ರೀತಿಯಾಗಿ ಗಡಿ ಗುರುತು ಮಾಡಿರುವ ಬಾಬ್ತು ಯಾವುದೇ ದಾಖಲಾತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಯವರ ಜಮೀನಿನ ಪೂರ್ವಕ್ಕೆ ನಮ್ಮದೇ ಜಮೀನು, ಉತ್ತರಕ್ಕೆ ನಮ್ಮ ಮನೆಗೆ ಹೋಗುವ ರಸ್ತೆ, ಪಶ್ಚಿಮಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಹಳೇಕೋಟೆಯ ಹೆಚ್.ಎಂ. ರಮೇಶ್ ರವರಿಗೆ ಸೇರಿದ ತರೀ ಜಮೀನು ಇರುತ್ತದೆ.

ಸ.ನಂ.307 ರ ಪೂರ್ವಕ್ಕೆ ನಮ್ಮ ಮನೆಗೆ ಹೋಗುವ ರಸ್ತೆ, ಪಶ್ಚಿಮಕ್ಕೆ ಪ್ರತಿವಾದಿಯವರ

ತೋಟ, ಉತ್ತರಕ್ಕೆ ನಮ್ಮ ಮನೆಗೆ ಹೋಗುವ ರಸ್ತೆ ಮತ್ತು ದಕ್ಷಿಣಕ್ಕೆ ಬಿಳ್ಳೂರಿನ ಮಂಜುನಾಥ್ ಗೌಡ ರವರ ತೋಟ ಬರುತ್ತದೆ. ನನ್ನ ತಂದೆಯು ಮೃತರಾಗುವ ಪೂರ್ವದಲ್ಲಿ ನನ್ನ ವಯಕ್ತಿಕ ಕೆಲಸದ ಕುರಿತು ನಾನು ಸರ್ಕಾರಿ ಕಛೇರಿಗಳಿಗೆ ಹೋಗಿರುತ್ತೇನೆ. ನನ್ನ ತಂದೆಯವರು ಅವರ ಜೀವಿತಾವಧಿಯಲ್ಲಿ ಪ್ರತಿವಾದಿಯವರ ಸ್ವತ್ತನ್ನು ತಮ್ಮ ಹೆಸರಿಗೆ ಮಾಡಿಕೊಡುವಂತೆ ತಾಲ್ಲೂಕು ಕಛೇರಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ನನಗೆ ವೈಯಕ್ತಿಕವಾಗಿ ಪ್ರತಿವಾದಿಯವರ ಪರಿಚಯ ಇರುವುದಿಲ್ಲ ಆದರೆ ಕಳೆದ 1 ವರ್ಷದ ಹಿಂದೆ ಅವರ ಮಕ್ಕಳ ಪರಿಚಯವಾಗಿರುತ್ತದೆ. ನನ್ನ ತಂದೆಯವರು ತಾಲ್ಲೂಕು ಕಛೇರಿಯಲ್ಲಿ ಸಲ್ಲಿಸಿದ ಅರ್ಜಿಗೆ ಪ್ರತಿವಾದಿಯವರು ತಕರಾರು ಮಾಡಿದ್ದ ಕಾರಣ ಸದರಿ ಅರ್ಜಿಯನ್ನು ವಜಾ ಮಾಡಿರುತ್ತಾರೆ. ಸದರಿ ಆದೇಶವು 2017 ನೇ ಸಾಲಿನಲ್ಲಿ ಮಾಡಲಾಗಿರುತ್ತದೆ. ಸದರಿ ವಿಷಯದ ಕುರಿತು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುತ್ತೇನೆ. 2017 ರಲ್ಲಿ ನನ್ನ ತಂದೆಯು ಸಲ್ಲಿಸಿದ ಅರ್ಜಿಯು ವಜಾಗೊಂಡನಂತರ ಪ್ರತಿವಾದಿಯವರ ಭೂಮಿ ಯಾರ ಹೆಸರಿನಲ್ಲಿ ಇದೆ ಎಂಬುದರ ಬಾಬ್ತು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುತ್ತೇನೆ. ಸದರಿ ವಿಷಯವನ್ನು ವಾದ ಪತ್ರದಲ್ಲಿಯೂ ತಿಳಿಸಲಾಗಿರುತ್ತದೆ ಎಂದರೆ ಸರಿ.

ತಹಶೀಲ್ದಾರ್ ಆದೇಶವನ್ನು ನ್ಯಾಯಲಾಯದ ಮುಂದೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. 2017 ನೇ ಸಾಲಿನ ಆದೇಶವನ್ನು ನಾವು ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. 2017 ನೇ ಸಾಲಿನವರೆಗೂ ಪ್ರತಿವಾದಿಯವರ ಭೂಮಿಗೆ ತೆರಿಗೆಯನ್ನು ಕಟ್ಟಿರುವ ಬಾಬ್ತು ದಾಖಲಾತಿಯನ್ನು ಹಾಜರುಮಾಡಿರುವುದಿಲ್ಲ ನಂತರದಲ್ಲಿ ನಾವು ಸದರಿ ಭೂಮಿಗೆ ತೆರಿಗೆಯನ್ನು ಪಾವತಿಸಿರುವುದಿಲ್ಲ. ಪ್ರತಿವಾದಿಯವರ ಹೆಸರಿನಲ್ಲಿ ಖಾತೆ ಇರುವ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ಪ್ರತಿವಾದಿಯವರ ತಂದೆಯನ್ನು ನೋಡಿರುವುದಿಲ್ಲ ಮತ್ತು ಸದರಿಯವರು ಉಡುಪಿಯಲ್ಲಿ ಮರಣಹೊಂದಿದ್ದ ಬಗ್ಗೆ ನನ್ನ ತಂದೆ ನನಗೆ ಮಾಹಿತಿಯನ್ನು ನೀಡಿರುತ್ತಾರೆ. ಸದರಿಯವರ ಮರಣ ಪ್ರಮಾಣ ಪತ್ರವನ್ನು ಉಡುಪಿಯ ನಗರಪಾಲಿಕೆಯಿಂದ ಪಡೆದುಕೊಂಡಿರುತ್ತೇನೆ. ಪ್ರತಿವಾದಿಯವರ ತಂದೆಯವರು ತಮ್ಮ ಜಮೀನನ್ನು ನಮ್ಮ ತಂದೆಗೆ 1988 ನೇ ಜುಲೈ ತಿಂಗಳಿನಲ್ಲಿ ಮಾರಾಟ ಮಾಡಲು ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ. ನಿಪಿ-9 ನೊಂದಾಯಿತ ಕರಾರು ಪತ್ರ ಆಗಿರುವುದಿಲ್ಲ. 2 ನೇ ಪ್ರತಿವಾದಿಯವರು ಮುತ್ತು ಪೂಜಾರಿ ರವರ ಮಗನಾಗಿರುತ್ತಾರೆ. ಸದರಿಯವರ ಹೆಸರನ್ನು ನನ್ನ ವಾದಪತ್ರದಲ್ಲಿ ನಮೂದಿಸಿರುವುದಿಲ್ಲ.

ನಿಪಿ-9 ರ ಬಾಬ್ತು ಪ್ರತಿವಾದಿಗಳಿಗಾಗಲೀ ಅವರ ತಂದೆಯವರಿಗಾಗಲೀ ಪ್ರತಿಫಲವನ್ನು ಪಡೆದುಕೊಂಡಿರುವ ಬಾಬ್ತು ಯಾವುದೇ ನೋಟೀಸನ್ನು ನೀಡಿರುವುದಿಲ್ಲ. 2017 ರಲ್ಲಿ ಮುತ್ತು ಪೂಜಾರಿಯವರು ಮರಣಹೊಂದಿದ ನಂತರ ಅವರ ಮೈನರ್ ಮಕ್ಕಳಿಗೂ ನೋಟೀಸನ್ನು ನೀಡಿರುವುದಿಲ್ಲ. ಪ್ರತಿವಾದಿಯವರು ಈ ಹಿಂದೆ ನಿರ್ಭಂದಕಾಜ್ಞೆಯನ್ನು ಕೋರಿ ದಾಖಲಿಸಿದ್ದ ದಾವೆಯಲ್ಲಿ ನನ್ನ ತಂದೆಯು ಸಲ್ಲಿಸಿದ್ದ ಪ್ರತಿವಾದಪತ್ರದ ಅಂಶಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ಪ್ರತಿವಾದ ಪತ್ರದಲ್ಲಿ ನನ್ನ ತಂದೆಯು ಯಾವ ಬೆಳೆಯನ್ನು ಬೆಳೆಯುತ್ತಿದ್ದೆ ಎಂದು ತಿಳಿಸಿರುವುದಿಲ್ಲ. ಪ್ರತಿವಾದಿಯವರ ತಂದೆಯು ಮರಣ ಹೊಂದುವ ಪೂರ್ವದಲ್ಲಿ ನನ್ನ ತಂದೆಯ

ವಿರುದ್ಧ ಒಂದು ಪೊಲೀಸ್ ದೂರನ್ನು ನೀಡಿದ್ದರು ಎಂದರೆ ಸರಿ. ಸದರಿ ದೂರನ್ನು ನನ್ನ ತಂದೆಯು ಪ್ರತಿವಾದಿಯವರು ಅಳವಡಿಸಿದ್ದ ಬೇಲಿಯನ್ನು ತೆರವುಗೊಳಿಸಿದ್ದ ಬಾಬ್ತು ನೀಡಲಾಗಿತ್ತು. ಪ್ರತಿವಾದಿಯವರ ಜಮೀನಿನಲ್ಲಿ ನನ್ನ ತಂದೆಯು ಬೆಳೆಯನ್ನು ಬೆಳೆಯುತ್ತಿದ್ದ ಬಾಬ್ತು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಅದೇ ರೀತಿಯಾಗಿ ನಮ್ಮ ಜಮೀನಿನಲ್ಲಿ ನಾವು ಎಷ್ಟು ಬೆಳೆಯನ್ನು ಬೆಳೆದು ಮತ್ತು ಎಷ್ಟು ಆದಾಯವನ್ನು ಪಡೆಯುತ್ತೇವೆ ಎಂಬುದರ ಬಾಬ್ತು ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

ಪ್ರತಿವಾದಿಯವರ ತಂದೆಯ ಸಹಿಯನ್ನು ನಾನು ಗುರುತಿಸಬಲ್ಲೆ ಮತ್ತು ನಿಪಿ-9 ಮತ್ತು 1 ರಲ್ಲಿರುವ ಸಹಿಯೇ ಪ್ರತಿವಾದಿಯವರ ತಂದೆಯ ನೈಜ ಸಹಿಯಾಗಿರುತ್ತದೆ. ನಾನು ಕೇವಲ ನಿಪಿ-9 ಮತ್ತು 1 ರಲ್ಲಿ ನೋಡಿ ಪ್ರತಿವಾದಿಯವರ ತಂದೆಯ ಸಹಿಯನ್ನು ಗುರುತಿಸಿರುತ್ತೇನೆಯೇ ಹೊರತು ಅವರ ಸಹಿಯನ್ನು ನಾನು ಕುದ್ದು ನೋಡಿರುವುದಿಲ್ಲ. ಪ್ರತಿವಾದಿಯವರು ಪ್ರತಿಫಲವನ್ನು ಅನುಭವಿಸಿರುವ ಬಾಬ್ತು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಯವರು ಒಂದೇ ಬಾರಿ 16,000/- ಹಣದ ಪ್ರತಿಫಲವನ್ನು ಪಡೆದಿರುತ್ತಾರೆ ಎಂದರೆ ಸರಿ. ನಿಪಿ-9 ರ ಬಾಬ್ತು ಪ್ರತಿವಾದಿಯವರು ಅವರ ಜಮೀನನ್ನು ಮಾರಾಟ ಮಾಡದಂತೆ ತಡೆಯಾಜ್ಞೆ ತರಲು ನಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಪ್ರತಿವಾದಿಯವರ ಜಮೀನನ್ನು ಅಭಿವೃದ್ಧಿಗೆ ನಾವು ಮಾಡಿರುವ ವೆಚ್ಚದ ಬಗ್ಗೆ ಯಾವುದೇ ವಿವರಣೆಗಳನ್ನು ನೀಡಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಸದರಿ ಜಮೀನಿನಲ್ಲಿ ಪಡೆದಿರುವ ಬೆಳೆಯ ಬಗ್ಗೆಯೂ ಯಾವುದೇ ದಾಖಲಾತಿಯನ್ನು ನೀಡಿರುವುದಿಲ್ಲ ಎಂದರೆ ಸರಿ. ನಿಪಿ-8 ರ ಪ್ರಕಾರ ತಾಲ್ಲೂಕು ಕಛೇರಿಗೆ ಖಾತೆಯನ್ನು ಮಾಡಿಕೊಡುವಂತೆ ನನ್ನ ತಂದೆಯು ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಮುತ್ತು ಪೂಜಾರಿಯವರು ಕುಟುಂಬದ ಬಗ್ಗೆ ಮತ್ತು ವಂಶವೃಕ್ಷದ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ ಎಂದರೆ ಸರಿ. ಸದರಿಯವರ ಮಕ್ಕಳ ವಿಳಾಸವು ಹೇಗೆ ತಿಳಿದಿರುತ್ತದೆ ಎಂಬುದರ ಬಗ್ಗೆ ನನ್ನ ತಂದೆಯು ನನಗೆ ಮಾಹಿತಿಯನ್ನು ನೀಡಿರುವುದಿಲ್ಲ.

ನಿಪಿ-1 ನ್ನು ಜಗದೀಶ್ ಮತ್ತು ನೀಲಕಂಠ ಎಂಬುವವರ ಸಮಕ್ಷಮದಲ್ಲಿ ಬರವಣಿಗೆ ಮಾಡಲಾಗಿರುತ್ತದೆ. ನಿಪಿ-1 ರಲ್ಲಿ ಸದರಿ ವಿಷಯವನ್ನು ಬರವಣಿಗೆ ಮಾಡಿರುವುದಿಲ್ಲ. ಅದೇ ರೀತಿಯಾಗಿ ಮುತ್ತು ಪೂಜಾರಿ ರವರ ಕುಟುಂಬಸ್ಥರ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ತಂದೆಯ ವಿರುದ್ಧ ಪ್ರತಿವಾದಿಯವರು ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ಇನ್ಯಾವುದೇ ದೂರನ್ನು ದಾಖಲಿಸಿರುವುದಿಲ್ಲ. ಮುತ್ತು ಪೂಜಾರಿಯವರಿಗೆ ಅವರ ಜಮೀನು 1982-83 ನೇ ಸಾಲಿನಲ್ಲಿ ಮಂಜೂರಿಯಾಗಿರುತ್ತದೆ. ಮುತ್ತು ಪೂಜಾರಿಯವರು ಸದರಿ ಜಮೀನನ್ನು ನನ್ನ ತಂದೆಗೆ ಬೆಳೆಯನ್ನು ಬೆಳೆದುಕೊಳ್ಳುವಂತೆ ತಿಳಿಸಿದ ಬಾಬ್ತು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.